MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 ENGLISH DAILY Subscription Yearly - Rs. - TUESDAY 14-12-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಸಸ್ಯಜನ್ಯ ತೈಲ ಆಮದು ಹೆಚ್ಚಳ

ನವೆಂಬರ್ ತಿಂಗಳಲ್ಲಿ ಭಾರತದ ಸಸ್ಯಜನ್ಯ ತೈಲ ಆಮದು ಹಿಂದಿನ ವರ್ಷದ ನವೆಂಬರ್ ತಿಂಗಳಿಗೆ ಹೋಲಿಸಿದಾಗ 6 ಶೇಕಡಾ ಹೆಚ್ಚಳವಾಗಿ 11,73,747 ಟನ್ ಗಳಿಗೆ ಹೆಚ್ಚಳಗೊಂಡಿದೆಯೆಂದು SEA ಪ್ರಕಟಗೊಳಿಸಿದೆ. ಹಿಂದಿನ ವರ್ಷ ನವೆಂಬರ್ 10,60,549 ಟನ್ ಆಮದಾಗಿತ್ತು. ಖಾದ್ಯ ತೈಲಗಳ ಆಮದಿನಲ್ಲಿ ಸೋಯಬೀನ್ ಎಣ್ಣೆ ಆಮದು ಈ ವರ್ಷ ನವೆಂಬರ್ ನಲ್ಲಿ 474,160 ಆಗಿದ್ದು, ಹಿಂದಿನ ವರ್ಷ ನವೆಂಬರ್ ನಲ್ಲಿ 250,784 ಆಗಿತ್ತು. ಪಾಮೆಣ್ಣೆ ಆಮದು 477,160 ಟನ್ ಗಳಾಗಿದ್ದು, ಹಿಂದಿನ ವರ್ಷ ನವೆಂಬರ್ ನಲ್ಲಿ 589,268 ಟನ್ ಗಳಾಗಿತ್ತು.

## ಅಂತರಾಷ್ಟ್ರೀಯ ಅಕ್ಕಿ ರಫ್ತು ದರ ಇಳಿಕೆ

ದುರ್ಬಲ ಕರೆನ್ಸಿ ವಿನಿಮಯ ದರ ಹಾಗೂ ಪೂರೈಕೆ ಹೆಚ್ಚಳದಿಂದ ಭಾರತ, ವಿಯೆಟ್ನಾಂ, ಥೈಲಾಂಡ್ ಗಳ ಅಕ್ಕಿ ರಫ್ತು ದರಗಳು ಇಳಿಕೆಗೊಂಡಿದೆ. ಭಾರತದ ರಫ್ತು ದರ 2016 ರ ದಶಂಬರ್ ತಿಂಗಳ ನಂತರ ಕನಿಷ್ಠ ಮಟ್ಟಕ್ಕೇಳಿದಿದೆ. ಅಧಿಕ ಪೂರೈಕೆ ಹಾಗೂ ರೂಪಾಯಿ ವಿನಿಮಯ ದರ 2 ತಿಂಗಳ ಕನಿಷ್ಠ ಮಟ್ಟಕ್ಕಿಳಿದುದರಿಂದ ದರ ಇಳಿಕೆಯಾಗಿದೆಯೆನ್ನಲಾಗಿದೆ. ಇದರಿಂದ ಅಂತರಾಷ್ಟ್ರೀಯವಾಗಿ ಭಾರತದ ಅಕ್ಕಿ ದರ ಸ್ಪರ್ಧಾತ್ಮಕವಾಗಿದೆ.